ಪೋಲೀಸ್ ಠಾಣೆಗಳಲ್ಲಿ ಬಂಧಿಗಳ ಆರೋಗ್ಯ ತಪಾಸಣೆ ಕುರಿತಂ

೪೦೭ (೫೧೩) ಶ್ರೀ ಎ. ಕೆ. ಆನಂತಕೃಷ್ಣ (ಶಿವಾಜಿನಗರ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಂಗಳೂರು ನಗರದಲ್ಲಿ ಹೊಸ ಪೋಲೀಸ್ ಕಮೀಷನರ್ ಮತ್ತು ವಿಶೇಷ ಪೋಲೀಸ್ ಕಮೀಷನರ್‌ರವರುಗಳು ಅಧಿಕಾರ ವಹಿಸಿಕೊಂಡ ಮೇಲೆ ನಾಗರೀಕರ ಮೇಲೆ ಗಲಾಟೆ ಮತ್ತು ಕಿರುಕುಳದ ಬಗ್ಗೆ ದಾಖಲಾದ ಪ್ರಕರಣಗಳೆಷ್ಟು ? (ಠಾಣಾವಾರು ವಿವರ ನೀಡುವುದು)

ಆ) ಠಾಣೆಯಲ್ಲಿ ಬಂಧಿಗಳಾದವರು ಪೋಲೀಸ್ ಕಿರುಕುಳ ನಿರ್ಲಕ್ಷಿಸಿ ಅಥವಾ ಆರೋಗ್ಯ ತಪಾಸಣೆ ಕೊಡಿಸದೆ ಸತ್ತವರ ಸಂಖ್ಯೆ ಎಷ್ಟು ?

ಇ) ಪೋಲೀಸ್ ಠಾಣೆಯಲ್ಲಿ ಬಂಧಿಗಳ ಆರೋಗ್ಯ ತಪಾಸಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಈ) ಪೋಲೀಸರಿಂದ ಬಂಧಿಸಲ್ಪಟ್ಟ ಎಲ್ಲಾ ವ್ಯಕ್ತಿಗಳನ್ನು ಅವರ ಆರೋಗ್ಯದ ದೃಷ್ಟಿಯಿಂದ ಅವರುಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಧೃಡೀಕರಣ ಪತ್ರವನ್ನು ಪಡೆದುಕೊಳ್ಳುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಉ) ಹಾಗಿದ್ದಲ್ಲಿ ಸರ್ಕಾರಿ ಮತ್ತು ಖಾಸಗೀ ವೈದ್ಯರುಗಳ ತಂಡದ ಸೇವೆಯನ್ನು ಈ ಉದ್ದೇಶಕ್ಕಾಗಿ ಬಳಸಿಕೊಳ್ಳುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಊ) ಲಾಕಪ್‌ನಲ್ಲಿ ಆದ ಗಾಯ ಅಥವಾ ಸಾವುಗಳಲ್ಲಿ ಶಿಕ್ಷೆಗೊಳಗಾದ ಅಧಿಕಾರಿಗಳ ಸಂಖ್ಯೆ ಎಷ್ಟು ? ಹಾಗೂ ಎಷ್ಟುಜನ ಅಧಿಕಾರಿಗಳನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು).—

ಅ) ೫ ಪ್ರಕರಣಗಳು (ವಿವರಗಳನ್ನು ಅನುಬಂಧ–ಎ ನಲ್ಲಿ ನೀಡಲಾಗಿದೆ.)

ಆ) ಒಂದು ಪ್ರಕರಣ ದಿನಾಂಕ ೬–೧೨–೯೪ರಂದು ಶ್ರೀ ಸುಂದರರಾಜು ಆಚಾರಿ ಎಂಬುವರನ್ನು ಕಡಿಮೆ ಚಿನ್ನಕೊಟ್ಟಂಥ ವಿಷಯಕ್ಕೆ ಸಂಬಂಧಿಸಿದ ದೂರಿನ ಆಧಾರದ ಮೇಲೆ ಕಮರ್ಷಿಯಲ್ ಸ್ಟ್ರೀಟ್ ಪೋಲೀಸ್ ಠಾಣೆಗೆ ಕರೆತಂದಾಗ ಆಸ್ಪತ್ರೆಯಲ್ಲಿ ಸತ್ತಿರುತ್ತಾರೆ. ಈ ಪ್ರಕರಣವು ಸಿ. ಒ. ಡಿ. ತನಿಖಾ ಹಂತದಲ್ಲಿದೆ.

ಇ) ಬಂಧಿತ ಆರೋಪಿಗಳ ಆರೋಗ್ಯ ಸರಿಯಾಗಿಲ್ಲದೇ ಇರುವುದು ಕಂಡು ಬಂದಾಗ ಕೂಡಲೇ ವೈದ್ಯಕೀಯ ತಪಾಸಣೆ ಮತ್ತು ವೈದ್ಯಕೀಯ ಸೌಲಭ್ಯ ಒದಗಿಸುವಂತೆ ಕಟ್ಟುನಿಟ್ಟಾದ ಸೂಚನೆಯನ್ನು ನೀಡಲಾಗಿದೆ.

ಈ) —ಇಲ್ಲ—

ಉ) —ಉದ್ಭವಿಸುವುದಿಲ್ಲ—

ಊ) ಬೆಂಗಳೂರು ನಗರ, ಕಮರ್ಷಿಯಲ್ ಸ್ಟ್ರೀಟ್ ಪೋಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಶ್ರೀ ಮೊಹಮ್ಮದ್ ಹುಸೇನ್ ಮತ್ತು ಸಹಾಯಕ ಸಬ್ ಇನ್ಸ್‌ಪೆಕ್ಟರ್ ಶ್ರೀ ಎಂ. ಮಾದಯ್ಯ ಇವರುಗಳನ್ನು ಸೇವೆಯಿಂದ ಅಮಾನತ್ತಿನಲ್ಲಿಡಲಾಗಿದೆ.

ಅನುಬಂಧ–ಎ

೧) ದಿನಾಂಕ: ೨೮–೧೦–೧೯೯೩ ರಂದು ಬೆಂಗಳೂರಿನಲ್ಲಿ. ದಾಸರಹಳ್ಳಿಯ ಪ್ರಶಾಂತನಗರದ ವ್ಯಕ್ತಿಯಾದ ಶ್ರೀ ನಾರಾಯಣ ಎಂಬುವವರು ಪೀಣ್ಯ ಪೋಲೀಸ್ ಠಾಣೆಗೆ ಸಂಚಾರಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಪಿ. ಎಸ್ ಪಾಟೀಲ್. ಎಂಬುವವರು ದಿನಾಂಕ: ೨೭–೧೦–೧೯೯೩ ರಂದು ನನಗೆ ರಸ್ತೆಯಲ್ಲಿ ಥಳಿಸಿರುವ ಬಗ್ಗೆ ದೂರು ನೀಡಿರುತ್ತಾರೆ. ಪೀಣ್ಯ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ: ೧೯೬:೯೩ ಕಲಂ ೩೨೪ ಭಾರತೀಯ ದಂಡ ಸಂಹಿತೆ ಪ್ರಕಾರ ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದು, ವಿಚಾರಣೆಯು ಪ್ರಗತಿಯಲ್ಲಿರುತ್ತದೆ. ಹಾಗೂ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರವರನ್ನು ಅಮಾನತ್ತಿನಲ್ಲಿಡಲಾಗಿದೆ ಮತ್ತು ಇಲಾಖಾ ವಿಚಾರಣೆಯು ಬಾಕಿ ಇರುತ್ತದೆ. ಈಗ ಅವರು ಅಮಾನತ್ತಿನಿಂದ ಬಿಡುಗಡೆ ಹೊಂದಿರುತ್ತಾರೆ.

೨) ದಿನಾಂಕ: ೧೧–೧೧–೧೯೯೩ ರಿಂದ ದಿನಾಂಕ: ೧೬–೧೧–೯೩ರ ವರೆಗೆ ಗೋಪಿಕೃಷ್ಣ ಎಂಬ ವ್ಯಕ್ತಿಯನ್ನು ಕಾನೂನು ಬಾಹಿರವಾಗಿ ಉಪ್ಪಾರಪೇಟೆ ಪೋಲೀಸ್ ಠಾಣೆಯಲ್ಲಿ ಬಂಧನದಲ್ಲಿಟ್ಟು ಕಿರುಕುಳ ಕೊಟ್ಟ ಮೇರೆಗೆ ಆಪಾದಿಸಲಾಗಿದ್ದು, ಇದರ ಮೇರೆಗೆ ಶ್ರೀ ಶ್ರೀನಿವಾಸ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಅಪರಾಧ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಯುತ್ತಿದೆ. ವಿಚಾರಣೆಯು ಪ್ರಗತಿಯಲ್ಲಿದೆ.

೩) ದಿನಾಂಕ: ೧೪–೧೧–೧೯೯೩ ರಂದು ಆಟೋ ಚಾಲಕರಾದ ಶ್ರೀ ರಾಜಣ್ಣ ಎಂಬುವವರನ್ನು ಯಶವಂತಪುರದ ಪೋಲೀಸ್ ಠಾಣೆ ಬಳಿಯಿರುವ ಗೋಪಾಲ್ ಟಾಕೀಸ್ ಆಟೋ ನಿಲ್ದಾಣದಲ್ಲಿ ಪೋಲೀಸ್ ಪೇದೆ ೫೧೧೮ ಇವರು ಥಳಿಸಿರುವ ಬಗ್ಗೆ ಯಶವಂತಪುರ ಪೋಲೀಸ್ ಠಾಣೆಯಲ್ಲಿ ದೂರು ನೀಡಿರುತ್ತಾರೆ. ಸದರೀ ಪ್ರಕರಣದ ಬಗ್ಗೆ ಯಶವಂತಪುರ ಪೋಲೀಸ್ ಠಾಣೆಗೆ ಅಪರಾಧ ಸಂಖ್ಯೆ ೬೧೩:೯೩ ಕಲಂ ೩೪೧, ೩೨೩ ೫೦೬ ಭಾರತೀಯ ದಂಡ ಸಂಹಿತೆ ಪ್ರಕರಣವನ್ನು ದಾಖಲು ಮಾಡಿಕೊಂಡು ವಿಚಾರಣೆ ನಡೆಸಿ, ಪೋಲೀಸ್ ಪೇದೆಯನ್ನು ಅಮಾನತ್ತಿನಲ್ಲಿಟ್ಟು ನಂತರ ಅಮಾನತ್ತಿನಿಂದ ಬಿಡುಗಡೆ ಮಾಡಲಾಯಿತು. ವಿಚಾರಣೆ ಮುಗಿದನಂತ ಪ್ರಕರಣದ ಬಗ್ಗೆ 'ಬಿ' ಅಂತಿಮ ವರದಿಯನ್ನು ದಿನಾಂಕ ; ೧೦–೦೩–೧೯೯೪ ರಂದು ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ.

೪) ದಿನಾಂಕ : ೨–೧೧–೯೩ ರಂದು ರಾತ್ರಿ ಸುಮಾರು ೧೨–೨೦ ಘಂಟೆಯಲ್ಲಿ ಶ್ರೀ ರುದ್ರಮೂರ್ತಿ ಸಂ. ೬೭:೩, ಎರಡನೇ ಮುಖ್ಯರಸ್ತೆ, ೩ನೇ ಘಟ್ಟ ೩ನೇ ಬ್ಲಾಕ್, ಬಸವೇಶ್ವರ ನಗರ, ಇವರು ಸುಬ್ರಮಣ್ಯ ಪೋಲೀಸ್ ಸ್ಟೇಷನ್‌ಗೆ ದೂರು ನೀಡಿ, ಅದೇದಿನ ಬೆಳಿಗ್ಗೆ ಸುಮಾರು ೧೦ ಘಂಟೆಯ ಸಮಯದಲ್ಲಿ ಮರಿಯಪ್ಪನಪಾಳ್ಯ ಬಸ್ ಸ್ಟಾಪ್ ಬಳಿ ಸಂಚಾರಿ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮತ್ತು ಸಂಚಾರಿ ಪೋಲೀಸ್ ಪೇದೆ ಸ್ಕೂಟರ್ ಸವಾರಿ ಮಾಡುತ್ತಿದ್ದ ರುದ್ರಮೂರ್ತಿಯನ್ನು ನಿಲ್ಲಿಸಿ, ಹೆಲ್ಮೆಟ್ ಧರಿಸಿಲ್ಲವೆಂದು ಸಂಚಾರಿ ಪೋಲೀಸ್ ಪೇದೆ ಶ್ರೀ ಶಿವರುದ್ರಯ್ಯನವರು ತನ್ನ ಪೋಲೀಸ್ ಟೊಪ್ಪಿಯಿಂದ ಹೊಡೆದದ್ದರಿಂದ ಗಾಯಗಳಾಗಿವೆಯೆಂದು ದೂರು ನೀಡಿರುತ್ತಾರೆ. ಇದರ ಮೇರೆಗೆ ಸುಬ್ರಮಣ್ಯ ಪೋಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ: ೩೩೮:೯೩ ಕಲಂ ೩೨೪ ಭಾರತೀಯ ದಂಡ ಸಂಹಿತೆ ಪ್ರಕಾರ ಮೊಕದ್ದಮೆ ದಾಖಲು ಮಾಡಿಕೊಂಡು ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮುರಳಿ ಮತ್ತು ಪೋಲೀಸ್ ಪೇದೆ ಶಿವರುದ್ರಯ್ಯ ರಾಜಾಜಿನಗರ ಸಂಚಾರಿ ವಿಭಾಗ ಇವರನ್ನು ಅಮಾನತ್ತಿನಲ್ಲಿಡಲಾಯಿತು. ಸದರೀ ಪ್ರಕರಣದ ಬಗ್ಗೆ ವಿಚಾರಣೆಯಾದ ನಂತರ ಅಮಾನತ್ತಿನಿಂದ ಬಿಡುಗಡೆ ಮಾಡಲಾಗಿದೆ.

೫) ದಿನಾಂಕ: ೨–೧೨–೯೩ರಂದು ಶ್ರೀ ಎಂ. ನಾಗರಾಜ್, ಮಾಜಿ ಅಧ್ಯಕ್ಷರು ಹೆಬ್ಬಾಳ ಗ್ರಾಮ ಪಂಚಾಯಿತಿ ಇವರಿಗೆ ಹೆಬ್ಬಾಳ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಎನ್. ಶಿವಪ್ರಸಾದ್ ಇವರು ಅದೇ ದಿನ ಸುಮಾರು ೭ ಘಂಟೆ ೧೫ ನಿಮಿಷಕ್ಕೆ ಪೋಲೀಸ್ ಸ್ಟೇಷನ್ನಿಗೆ ಬಂದ ತಕ್ಷಣ ಹೊಡೆದ ಬಗ್ಗೆ ದೂರು ನೀಡಿರುತ್ತಾರೆ. ಹೆಬ್ಬಾಳ ಪೋಲೀಸ್ ಠಾಣೆ ಅಪರಾಧ ಸಂಖ್ಯೆ: ೫೬೪, ಕಲಂ ೩೪೧, ೩೨೪ ಭಾರತೀಯ ದಂಡ ಸಂಹಿತೆ ಪ್ರಕಾರ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಶಿವಪ್ರಸಾದ್ ಇವರ ವಿರುದ್ಧ ಪ್ರಕರಣವನ್ನು ದಾಖಲು ಮಾಡಿಕೊಂಡು ವಿಚಾರಣೆ ಮಾಡಲಾಗುತ್ತಿದೆ. ಶ್ರೀ ಶಿವಪ್ರಸಾದ್ ಈಗ ಹೆಬ್ಬಾಳ ಪೋಲೀಸ್ ಠಾಣೆಯಿಂದ ಸಿ. ಸಿ. ಬಿ. ಗೆ ವರ್ಗಾವಣೆಯಾಗಿರುತ್ತದೆ.